# ಕರ್ನಾಟಕ ಉದ್ಯೋಗ ಮಿತ್ರ

ನಂ 49, 3ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01 ದೂರವಾಣಿ: 080–2228 2392,

ಫ್ಯಾಕ್ಸ್: 080–22266063 ಇ–ಮೇಲ್: md@kumbangalore.com


---

ಸಂಖ್ಯೆ: ಕುಮ್/ಇ2/ಆರ್‌ಟಿಐ/ನೋಟಿಫಿಕೇಶನ್/2017–18 ದಿನಾಂಕ: 17.08.2017

## ಅಧಿಸೂಚನೆ

ವಿಷಯ: ಮಾಹಿತಿ ಹಕ್ಕು ಕಾಯ್ದೆ 2005ರ ಉಪಬಂಧನಗಳ ಅನ್ವಯ ಮಾಹಿತಿ ಪ್ರಕಟಣೆ.

ಉಲ್ಲೇಖ: ಕಾನೂನು ಮತ್ತು ನ್ಯಾಯಿಕ ಸಚಿವಾಲಯದಿಂದ ನೀಡಲಾದ ಭಾರತದ ವಿಶೇಷ ಗೆಜೆಟ್‌ನಲ್ಲಿ ದಿನಾಂಕ: 15.06.2005 ರಂದು

**ಪ್ರಕಟಪಡಿಸಿರುವ ಅಧಿಸೂಚನೆ.**

ದಿನಾಂಕ: 15.06.2005 ರ ಮಾಹಿತಿ ಹಕ್ಕಿನ ಕಾಯ್ದೆ, 2005 ಕ್ಕೆ ಸಂಬಂಧಿಸಿದ ಅಧಿಸೂಚನೆ ಅನುಸಾರ ಮತ್ತು ಸದರಿ ಕಾಯ್ದೆಯ ಪರಿಚ್ಛೇದ–4ರ ಅನ್ವಯ ಈ ಕೆಳಕಂಡ ಮಾಹಿತಿಯನ್ನು ಈ ಮೂಲಕ ಒದಗಿಸಲಾಗಿದೆ.

**ಕರ್ನಾಟಕ ಉದ್ಯೋಗ ಮಿತ್ರದ ಸಂರಚನೆ, ಇದರ ಕಾರ್ಯಗಳು ಮತ್ತು ಕರ್ತವ್ಯಗಳ ವಿವರ:–**

ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ಜಿ.ಓ.ಸಿಐ 69 ಎಸ್‌ಪಿಸಿ 92, ಬೆಂಗಳೂರು ದಿನಾಂಕ: 17.09.1992ರ ಅನ್ವಯ ಸ್ಥಾಪನೆಯಾಗಿರುವ ಮತ್ತು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆ 1960ರ ಅನ್ವಯ (ಸಂ–17/1960),ಸಂ:415/1992–93 ದಿನಾಂಕ: 08.10.1992ರ ಅನುಸಾರ ನೋಂದಣಿಯಾಗಿರುವ ಒಂದು ಸಂಘ.

**1. ಕರ್ನಾಟಕ ಉದ್ಯೋಗ ಮಿತ್ರದ ಕಾರ್ಯವ್ಯಾಪ್ತಿ :–**

**ಸಂಘದ ಧ್ಯೇಯೋದ್ದೇಶಗಳು:**

i. ಕರ್ನಾಟಕ ರಾಜ್ಯದಲ್ಲಿನ ಕೈಗಾರಿಕಾ ವಲಯದಲ್ಲಿ ಬಂಡವಾಳ ಹೂಡಲು ಆಸಕ್ತಿ ಹೊಂದಿರುವ ಹೂಡಿಕೆದಾರರು, ಉದ್ದಿಮೆದಾರರೆಲ್ಲರಿಗೂ ಪೂರಕ ಸೇವೆ ಒದಗಿಸುವುದು.

ii. ಅರ್ಜಿಗಳನ್ನು ಭರ್ತಿ ಭರ್ತಿ ಮಾಡಲು ಸಲಹೆ, ಅದನ್ನು ಪರಿಷ್ಕರಿಸುವುದು ಹಾಗೂ ತೀರ್ಮಾನ ತೆಗೆದುಕೊಳ್ಳಲು ರಾಜ್ಯಮಟ್ಟದ ಏಕ ಗವಾಕ್ಷಿ ಅಂಗೀಕಾರ ಸಮಿತಿ ಹಾಗೂ ರಾಜ್ಯ ಉನ್ನತ ಮಟ್ಟದ ಸಮಿತಿ ಮುಂದಿರಿಸಲು ರಾಜ್ಯಮಟ್ಟದ ಏಕ ಗವಾಕ್ಷಿ ಅಂಗೀಕಾರ ಸಮಿತಿ/ರಾಜ್ಯದ ಉನ್ನತ ಮಟ್ಟದ ಅಂಗೀಕಾರ ಸಮಿತಿ (SLSWCC/SHLCC) ಗಳಿಗೆ ಸಚಿವಾಲಯ ಸೇವೆಗಳನ್ನು ಒದಗಿಸುವುದು.

iii. ಕರ್ನಾಟಕ ಕೈಗಾರಿಕಾ (ಸೌಲಭ್ಯ) ಕಾಯ್ದೆ, 2002 ಮತ್ತು ನಿಯಮಗಳ ಅನುಸಾರ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ಎಸ್‌ಎಚ್‌ಎಲ್‌ಸಿಸಿ ಯಿಂದ ಕೈಗೊಂಡ ತೀರ್ಮಾನಗಳನ್ನು ಅನುಷ್ಠಾನಗೊಳಿಸುವುದರ ಬಗ್ಗೆ ಮೇಲುಸ್ತುವಾರಿ ನೋಡಿಕೊಳ್ಳುವುದು, ರಾಜ್ಯ ಸರ್ಕಾರದ ಇಲಾಖೆಗಳಿಂದ ಮತ್ತು ಏಜೆನ್ಸಿಗಳಿಂದ ಒದಗಿಸುವ ವಿವಿಧ ನೆರವುಗಳು ಮತ್ತು ಬೆಂಬಲಗಳು ನಿಗದಿತ ಕಾಲಾವಧಿ ಒಳಗೆ ಉದ್ಯಮಿಗಳಿಗೆ ದೊರೆಯುವಂತೆ ನೋಡಿಕೊಳ್ಳುವುದು, ಯೋಜನೆಗಳ ಸುಗಮ ಅನುಷ್ಠಾನಕ್ಕೆ ಒತ್ತು ನೀಡಿಕೆ.

iv. ಸಣ್ಣ ಪ್ರಮಾಣದ ಉದ್ದಿಮೆಗಳು, ಮಧ್ಯಮ ಮತ್ತು ಬೃಹತ್ ಪ್ರಮಾಣದ ಉದ್ಯಮಗಳಂತಹ ಎಲ್ಲಾ ವಲಯದಲ್ಲಿ ಹಾಲಿಯಿರುವ ಮತ್ತು ಹೊಸದಾಗಿ ಆರಂಭವಾಗುವ ಕೈಗಾರಿಕಾ ಘಟಕಗಳಿಗೆ ಸಮಸ್ಯೆ ಪರಿಹರಿಸುವ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು. ಸದರಿ ಉದ್ದಿಮೆಗಳಿಗೆ ಕೈಗಾರಿಕಾ ಪ್ರವರ್ಧನೆ ಮತ್ತು ಇತರೆ ಸಂಬಂಧಪಟ್ಟ ಇಲಾಖೆ ಸಂಸ್ಥೆಗಳಿಂದ ಅಗತ್ಯವಾದ ಹಣಕಾಸಿನ ನೆರವು ಪಡೆಯಲು ಅವುಗಳಿಗೆ ನೆರವಾಗುವುದು. ಈ ಉದ್ದೇಶಕ್ಕಾಗಿ ಉದ್ಯೋಗ ಮಿತ್ರದ ಅಧಿಕಾರಿಗಳು ನಿಯತಕಾಲಿಕವಾಗಿ ಜಿಲ್ಲೆಗಳಿಗೆ ಭೇಟಿನೀಡಿ ಸ್ಥಳೀಯ ಕೈಗಾರಿಕೆಗಳ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ರಾಜ್ಯ ಮಟ್ಟದಲ್ಲಿ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ಎಸ್‌ಎಚ್‌ಎಲ್‌ಸಿಸಿಯ ಸಮಿತಿಯ ಗಮನಕ್ಕೆ ತರುವುದು.

v. ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆ, ವ್ಯಾಪಾರ, ವಾಣಿಜ್ಯ ವಲಯದಲ್ಲಿ ದೊರೆಯುವ ಅವಕಾಶಗಳ ಬಗ್ಗೆ ಮತ್ತು ಇವುಗಳಲ್ಲಿ ಭಾಗವಹಿಸುವ ಕುರಿತಂತೆ ವಿವರಗಳನ್ನು ಸಾರ್ವಜನಿಕರಿಗೆ ಮತ್ತು ಬಂಡವಾಳ ಹೂಡಿಕೆದಾರರಿಗೆ ಮತ್ತು ಉದ್ಯಮಿಗಳಿಗೆ ಮಾಹಿತಿ ಒದಗಿಸುವುದು.

vi. ಕೈಗಾರಿಕಾ ಪರಿಸರವನ್ನು ಸೃಷ್ಟಿಸುವುದು ಮತ್ತು ಅದನ್ನು ಪ್ರೋತ್ಸಾಹಿಸಲು ಸಾಧಾರಣವಾದ ಜಾಹೀರಾತು ಮತ್ತು ಪ್ರಚಾರದ ಮೂಲಕ ಸಮೂಹ ಮಾಧ್ಯಮಗಳಲ್ಲಿ ಮಾಹಿತಿ ಪ್ರಕಟಿಸುವುದು ಹಾಗೂ ರಾಜ್ಯದಲ್ಲಿ ನೂತನ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಲಭ್ಯವಿರುವ ಸೌಲಭ್ಯಗಳು ಮತ್ತು ಪ್ರೋತ್ಸಾಹಗಳ ಕುರಿತು ಅರಿವು ಮೂಡಿಸುವುದು.

vii. ಭಾವೀ ಹೂಡಿಕೆದಾರರು/ಉದ್ಯಮಿಗಳನ್ನು ಗುರುತಿಸುವುದು ಮತ್ತು ಪ್ರೋತ್ಸಾಹಿಸುವುದು ಹಾಗೂ ಕರ್ನಾಟಕ ರಾಜ್ಯದಲ್ಲಿ ಕೈಗಾರಿಗಾ ಘಟಕಗಳನ್ನು ಸ್ಥಾಪಿಸುವಂತೆ ಅವರಿಗೆ ಪ್ರೇರೇಪಣೆ ಮಾಡುವುದು.

viii. ಅನಿವಾಸಿ ಭಾರತೀಯರಿಗೆ ನೋಡಲ್ ಏಜೆನ್ಸಿಯಾಗಿ ಮತ್ತು ಪ್ರವರ್ಧನಾ ಸಂಸ್ಥೆಗಳ ಜೊತೆ ನಿರಂತರ ಸಂಪರ್ಕಹೊಂದಿದ್ದು ಎನ್‌ಆರ್‌ಐ/ವಿದೇಶಿ ಬಂಡವಾಳ ಹೂಡಿಕೆಯನ್ನು ಪ್ರವರ್ಧನೆ ಮಾಡುವುದು.

ix. ಕರ್ನಾಟಕದಲ್ಲಿ ಮತ್ತು ಕರ್ನಾಟಕದ ಹೊರಗೆ ಹಾಗೂ ವಿದೇಶದಲ್ಲಿ ನೆಲೆಸಿರುವ ಭಾವೀ ಹೂಡಿಕೆದಾರರು/ಉದ್ಯಮಿಗಳನ್ನು ಗುರುತಿಸುವುದು ಮತ್ತು ಸಂಪರ್ಕಿಸುವುದು ಹಾಗೂ ವಿಶೇಷ ಪ್ರಚಾರಾಂದೋಲನಗಳು, ವಿಚಾರ ಸಂಕಿರಣಗಳನ್ನು ಏರ್ಪಡಿಸುವ ಮೂಲಕ ರಾಜ್ಯದಲ್ಲಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಪ್ರೇರೇಪಿಸುವುದು.

x. ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಯ ಪ್ರವರ್ಧನೆಯ ಗುರಿಯುಳ್ಳ ಯಾವುದೇ ಮೇಳ ವಸ್ತುಪ್ರದರ್ಶನ, ಸಮಾರಂಭ ಅಥವಾ ಪ್ರಚಾರವನ್ನು ಏರ್ಪಡಿಸುವುದು, ಪ್ರಾಯೋಜಿಸುವುದು, ಸಹಭಾಗಿಯಾಗುವುದು ಅಥವಾ ಭಾಗವಹಿಸುವುದು.

xi. ಪತ್ರಿಕೆಗಳು, ವಿಷಯ ಅಧ್ಯಯನಗಳು, ವರದಿಗಳು, ಕಿರುಹೊತ್ತಿಗೆಗಳು, ಕರಪತ್ರಗಳು, ನಿಯತಕಾಲಿಕಗಳು, ಡೈಜೆಸ್ಟ್‌ಗಳು, ಜರ್ನಲ್‌ಗಳು, ಯೋಜನೆ ವಿವರಗಳು, ಮ್ಯಾಗಜಿನ್‌ಗಳ ರೂಪದಲ್ಲಿ ವಿಚಾರ ಸಾಹಿತ್ಯ ಪ್ರಕಟಿಸುವುದು ಮತ್ತು ಇವುಗಳನ್ನು ಬಳಕೆದಾರರುಗಳಿಗೆ ಅಂದರೆ ಭಾವೀ ಉದ್ಯಮಿಗಳು, ಕುಶಲಕರ್ಮಿಗಳು ಮತ್ತು ಇತರೆ ಸಂಸ್ಥೆಗಳಿಗೆ ತಲುಪಿಸುವುದು/ ಹಂಚುವುದು ಹಾಗೂ ಇಂತಹ ಚಟುವಟಿಕೆಗಳಲ್ಲಿ ನಿರತರಾಗಿರುವ ಇತರೆ ಸಂಸ್ಥೆಗಳಿಗೆ ನೆರವು ನೀಡುವುದು.

xii. ದಾಖಲೆ ಪತ್ರಗಳನ್ನು ನಿರ್ವಹಣೆ ಮಾಡಲು, ಯೋಜನೆಗಳು, ವ್ಯಾಪಾರ ಮತ್ತು ಕೈಗಾರಿಕೆ ಬಗ್ಗೆ ಅಂಕಿಅಂಶಗಳನ್ನು ಒದಗಿಸಲು ಅಂಕಿಅಂಶಗಳ ಭಂಡಾರ ಸ್ಥಾಪನೆ ಮತ್ತು ಇದನ್ನು ಸರ್ಕಾರಕ್ಕೆ, ಸಂಸ್ಥೆಗಳಿಗೆ, ಹೂಡಿಕೆದಾರರಿಗೆ ಹಾಗೂ ಉದ್ಯಮಿಗಳಿಗೆ ತಿಳಿಸುವುದು.

xiii. ಕರ್ನಾಟಕ ರಾಜ್ಯದಲ್ಲಿ ಆರ್ಥಿಕ ಪ್ರಗತಿ ಮತ್ತು ಕೈಗಾರಿಕಾ ಅಭಿವೃದ್ಧಿಯಲ್ಲಿ ತೊಡಗಿರುವ ಎಲ್ಲಾ ಸಂಸ್ಥೆಗಳ ಪ್ರವರ್ಧನಾ ಚಟುವಟಿಕೆಗಳ ವಿಸ್ತರಣೆಗೆ ಸಹಕರಿಸುವುದು.

xiv. ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ನಿರ್ದಿಷ್ಟವಾಗಿ ಕೈಗಾರಿಕಾಭಿವೃದ್ಧಿಗಾಗಿ ಜಾರಿಯಲ್ಲಿರುವ ಯೋಜನೆಗಳು ಮತ್ತು ಸಾಮಾನ್ಯ ವಾತಾವರಣದ ಬಗ್ಗೆ ಪರಾಮರ್ಶನೆ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು.

xv. ಸಂಸ್ಥೆಯ ಧ್ಯೇಯಗಳನ್ನು ಸಾಧಿಸಲು ಹೂಡಿಕೆ ಮಾಡುವುದು ಮತ್ತು ಹಣಕಾಸಿನ ವ್ಯವಹಾರ ನಡೆಸುವುದು.

xvi. ರಾಜ್ಯದಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಸೂಕ್ತವಾದ ವಾತಾವರಣ ಸೃಷ್ಟಿಸಲು ಸೂಕ್ತವಾದ ಕರ್ತವ್ಯಗಳು ಮತ್ತು ಪಾತ್ರಗಳನ್ನು ನಿರ್ವಹಿಸುವುದು.

xvii. ಕಾಲಕಾಲಕ್ಕೆ ಆಡಳಿತ ಮಂಡಳಿ ವಹಿಸುವ ಯಾವುದೇ ಇತರೆ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

xviii. ಕರ್ನಾಟಕ ರಾಜ್ಯದಲ್ಲಿ ಮತ್ತು ನೆರೆಹೊರೆಯ ರಾಜ್ಯಗಳು/ದೇಶಗಳಲ್ಲಿನ ಕೈಗಾರಿಕಾಭಿವೃದ್ಧಿ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ಅಂಕಿಅಂಶಗಳು ಮತ್ತು ಇತರೆ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಹಂಚುವುದು.

**2. ಕರ್ನಾಟಕ ಉದ್ಯೋಗ ಮಿತ್ರದ ಆಡಳಿತ ಮಂಡಳಿ.**

ಎ. ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಬಿ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ.

ಸಿ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಡಿ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ

ಇ. ಸಿಇಒ ಮತ್ತು ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ.

ಎಫ್. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ.

ಜಿ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ.

ಎಚ್. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ.

ಐ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ.

ಜೆ. ಸರ್ಕಾರದ ಅಪರ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,

ಕೆ. ಸರ್ಕಾರದ ಉಪಕಾರ್ಯದರ್ಶಿ, ಹಣಕಾಸು ಇಲಾಖೆ.

**3. ಪ್ರಧಾನ ಕಚೇರಿ ಇರುವ ಸ್ಥಳ.**

ಕಂಪನಿಯ ನೋಂದಾಯಿತ ಕಚೇರಿಯ ನಂ 49, 3ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001 ಇಲ್ಲಿರುವುದು.

**4. ವಲಯಕಚೇರಿ ಇರುವ ಸ್ಥಳ.**

ಕರ್ನಾಟಕ ಉದ್ಯೋಗ ಮಿತ್ರ, ಕೊಠಡಿ ಸಂ. 209 ಮತ್ತು 210, ಕರ್ನಾಟಕ ಭವನ, ಖೇಲ್ ಗಾಂವ್ ರಸ್ತೆ, ಆ್ಯಂಡ್ರ್ಯೂಸ್ ಗಂಜ್, ದೆಹಲಿ–110049.

**ಕರ್ನಾಟಕ ಉದ್ಯೋಗ ಮಿತ್ರದ ಅಧಿಕಾರಿಗಳು ಮತ್ತು ನೌಕರರು ಹೊಂದಿರುವ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಕರ್ತವ್ಯಗಳು.**

1) ಪ್ರಧಾನ ಕಛೇರಿಯಲ್ಲಿರುವ ಅಧಿಕಾರಿಗಳ ವಿವರ ಮತ್ತು ಅವರ ಕರ್ತವ್ಯಗಳು.

**ವ್ಯವಸ್ಥಾಪಕ ನಿರ್ದೇಶಕರು**

ವ್ಯವಸ್ಥಾಪಕ ನಿರ್ದೇಶಕರು ಶಿಸ್ತುಪಾಲನಾಧಿಕಾರಿಗಳು ಹಾಗೂ ಕಂಪನಿಯ ಮತ್ತು ಸರ್ಕಾರದ ನೀತಿಗಳನ್ನು ಅನುಷ್ಠಾನಗೊಳಿಸುವ ಪ್ರಾಧಿಕಾರಿಯೂ ಆಗಿರುವರು.

**ಜಂಟಿ ನಿರ್ದೇಶಕರು–1**

- ಆಡಳಿತ
- ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ
- ಸುಲಲಿತ ವ್ಯವಹಾರ
- ಭೂಪರಿಶೋಧನಾ ಸಮಿತಿ ಸಭೆಗಳು
- ಮಾಹಿತಿ ಪಾಲುದಾರಿಗೆ ಸೇವೆಗಳು
- ಸಿಸಿಐ–ಪಿಎಂಜಿ ಸಭೆಗಳು
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಕಾರ್ಯ

**ಜಂಟಿ ನಿರ್ದೇಶಕರು–2**

- ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಸಭೆಗಳು
- ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಅನುಮೋದಿತ ಯೋಜನೆಗಳ ಅನುಷ್ಠಾನ ಸ್ಥಿತಿಗತಿಗಳ ಸಕಾಲಿಕರಣ
- ಕರ್ನಾಟಕ ಉದ್ಯೋಗ ಮಿತ್ರ, ಏರ್ಪಡಿಸುವ ಮತ್ತು ಭಾಗವಹಿಸುವ ಎಲ್ಲಾ ಕಾರ್ಯಕ್ರಮಗಳ ಸಮನ್ವಯ
- ಇ–ಉದ್ಯಮಿ
- ವಿಧಾನಸಭೆ ಮತ್ತು ಲೋಕಸಭೆ ಪ್ರಶ್ನಾವಳಿಗಳು
- ಶಾಸಕಾಂಗ ಸಮಿತಿಗಳು
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು

**ಜಂಟಿ ನಿರ್ದೇಶಕರು–4**

- ಎಸ್‌ಎಚ್‌ಎಲ್‌ಸಿಸಿ ಸಭೆಗಳು
- ಎಸ್‌ಎಚ್‌ಎಲ್‌ಸಿಸಿ ಅನುಮೋದಿತ ಯೋಜನೆಗಳ ಅನುಷ್ಠಾನ ಸ್ಥಿತಿಗತಿಗಳ ಸಕಾಲಿಕರಣ.
- ಎಲ್ಲಾ ಜಾಹೀರಾತುಗಳು, ಮಾಧ್ಯಮ ಮತ್ತು ಸಾರ್ವಜನಿಕ ಸಂಪರ್ಕ ಚಟುವಟಿಕೆಗಳ ಸಮನ್ವಯ.
- ಕಂಟ್ರಿ ಡೆಸ್ಕ್ಸ್
- ವಿಧಾನ ಪರಿಷತ್ ಮತ್ತು ರಾಜ್ಯಸಭಾ ಪ್ರಶ್ನಾವಳಿಗಳು
- ಆರ್‌ಟಿಐ ಅಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು.

**ಉಪ ನಿರ್ದೇಶಕರು–1**

- ವೆಬ್‌ಸೈಟ್ ನಿರ್ವಹಣೆ, ಇ–ಪೋರ್ಟಲ್ ನಿರ್ವಹಣೆ
- ವಿಧಾನಸಭೆ ಪ್ರಶ್ನಾವಳಿಗಳು
- ಪ್ರಚಾರಕಾರ್ಯ ನಿರ್ವಹಣೆ
- ಬೀದರ್, ಕಲಬುರಗಿ, ದಾವಣಗೆರೆ ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ವಲಯಗಳು: ರಾಸಾಯನಿಕಗಳು, ಫಾರ್ಮ, ಪೆಟ್ರೋಕೆಮಿಕಲ್ಸ್.
- ದೇಶ: ಚೈನಾ, ರಷ್ಯ, ನೆದರ್‌ಲೆಂಡ್ಸ್
- ಇಲಾಖೆಗಳು: ಬಿಡಬ್ಲ್ಯೂಎಸ್‌ಎಸ್‌ಬಿ, ಕೆಯುಡಬ್ಲ್ಯೂಎಸ್‌ಡಿಬಿ, ಬಿಎಂಆರ್‌ಡಿಎ, ಗಣಿ ಮತ್ತು ಭೂವಿಜ್ಞಾನ
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು.

**ಉಪ ನಿರ್ದೇಶಕರು–4**

- ಇಂಧನ ಇಲಾಖೆ
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೇ ಕಾರ್ಯ

**ಸಹಾಯಕ ನಿರ್ದೇಶಕರು–1**

- ಎಸ್‌ಎಚ್‌ಎಲ್‌ಸಿಸಿಗೆ ಕಾರ್ಯಸೂಚಿ ಟಿಪ್ಪಣಿ ಸಿದ್ಧಪಡಿಸುವುದು.
- ತುಮಕೂರು, ಗದಗ, ಮೈಸೂರು ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ಸಲಲಿತ ವ್ಯವಹಾರ
- ವಲಯಗಳು: ಉಕ್ಕು, ವಾಹನ
- ದೇಶ: ಜಪಾನ್, ಸ್ವೀಡನ್
- ಇಲಾಖೆಗಳು: ಆರ್‌ಡಿಪಿಆರ್, ಕಾರ್ಮಿಕ, ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು, ಕೈಮಗ್ಗ ಮತ್ತು ಜವಳಿ
- ವಿಧಾನ ಪರಿಷತ್ ವಿಷಯಗಳು
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು

**ಸಹಾಯಕ ನಿರ್ದೇಶಕರು–2**

- ಎಲ್‌ಎಸಿ/ಎಸ್‌ಎಲ್‌ಸಿಡಬ್ಲ್ಯೂಸಿಸಿಗೆ ಕಾರ್ಯಸೂಚಿ ಸಿದ್ಧಪಡಿಸುವುದು.
- ಆಡಳಿತ
- ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು.

**ಕಾರ್ಯನಿರ್ವಾಹಕ ಅಧಿಕಾರಿ–1**

- ಕೋಲಾರ, ಬೆಂಗಳೂರು ನಗರ, ಧಾರವಾಡ ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ವಲಯಗಳು: ಇಂಜಿನಿಯರಿಂಗ್, ನೀರು, ವೈದ್ಯಕೀಯ, ಇನ್‌ಸ್ಟ್ರುಮೆಂಟೇಷನ್.
- ದೇಶ: ಪೂರ್ವ ಯೂರೋಪ್, ಸಿಂಗಪುರ, ಜರ್ಮನಿ
- ಇಲಾಖೆ: ಡಿಐಸಿ, ಕೃಷಿ, ಎಪಿಎಂಸಿ, ಕೆಎಸ್‌ಎಸ್‌ಐಡಿಸಿ.
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು

**ಕಾರ್ಯನಿರ್ವಾಹಕ ಅಧಿಕಾರಿ–2**

- ಬೆಳಗಾವಿ, ಬಾಗಲಕೋಟೆ, ಬಿಜಾಪುರ ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ವಲಯ: ಪ್ರವಾಸೋಧ್ಯಮ, ಎಸ್ಇಜಡ್
- ದೇಶ: ಆಫ್ರಿಕನ್ ದೇಶಗಳು
- ಆರ್‌ಟಿಐಗೆ ಸಂಬಂಧಿಸಿದ ಕಾರ್ಯ
- ಇಲಾಖೆ: ಪ್ರವಾಸೋಧ್ಯಮ, ಹಣಕಾಸು, ರೆವಿನ್ಯೂ
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು.

**ಕಾರ್ಯನಿರ್ವಾಹಕ ಅಧಿಕಾರಿ–3**

- ಮಂಡ್ಯ, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ವಲಯ: ಮೂಲ ಸೌಲಭ್ಯ.
- ದೇಶ: ಅರಬ್ ದೇಶ
- ಇಲಾಖೆಗಳು: ಐಡಿಡಿ, ನಗರಾಭಿವೃದ್ಧಿ, ಮುದ್ರಾಂಕ ಮತ್ತು ನೋಂದಣಿ, ಬಿಐಎಪಿಎ, ಇಎಸ್ಐ, ಪಿಎಫ್
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯ

**ಕಾರ್ಯನಿರ್ವಾಹಕ ಅಧಿಕಾರಿ–4**

- ಮಂಗಳೂರು, ರಾಮನಗರ, ಕೊಡಗು, ಹಾವೇರಿಗೆ ನೋಡಲ್ ಅಧಿಕಾರಿ.
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು.

**ಕಾರ್ಯನಿರ್ವಾಹಕ ಅಧಿಕಾರಿ–5**

- ಉಡುಪಿ, ಮಂಗಳೂರು, ಕಾರವಾರ ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ವಲಯ: ಆರೋಗ್ಯ
- ದೇಶ: ಶ್ರೀಲಂಕ
- ಇಲಾಖೆಗಳು: ಬಿಡಿಎ, ನಗರ ಯೋಜನೆ, ಪೌರಾಡಳಿತ
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯ.

**ಕಾರ್ಯನಿರ್ವಾಹಕ ಅಧಿಕಾರಿ–6**

- ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ
- ಯಾದಗಿರಿ, ಚಿಕ್ಕಬಳ್ಳಾಪುರ, ಕೊಪ್ಪಳ ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ವಲಯಗಳು: ಶಿಕ್ಷಣ, ಸಕ್ಕರೆ, ಕೃಷಿ ಮತ್ತು ಆಹಾರ, ಸಿಮೆಂಟ್
- ದೇಶ: ಮಲೇಷ್ಯ, ಹಾಂಗ್‌ಕಾಂಗ್, ನೆದರ್‌ಲೆಂಡ್, ಯುಎಸ್ಎ, ಕೆನಡ
- ಇಲಾಖೆಗಳು: ಸಕ್ಕರೆ, ಗಣಿ ಮತ್ತು ಭೂವಿಜ್ಞಾನ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹ, ಸಾರಿಗೆ.
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು.

**ಕಾರ್ಯನಿರ್ವಾಹಕ ಅಧಿಕಾರಿ–7**

- ಬಳ್ಳಾರಿ, ರಾಯಚೂರು, ಹಾಸನ ಜಿಲ್ಲೆಗಳಿಗೆ ನೋಡಲ್ ಅಧಿಕಾರಿ
- ವ್ಯವಸ್ಥಾಪಕ ನಿರ್ದೇಶಕರು ವಹಿಸುವ ಯಾವುದೇ ಇತರೆ ಕಾರ್ಯಗಳು.

**ಅರ್ಜಿಸಲ್ಲಿಸುವ ಕ್ರಮ:–**

**ಹೊಸ ಪ್ರಸ್ತಾವನೆಗೆ ಆರ್ಜಿಸಲ್ಲಿಸುವಿಕೆ:–**

**<u>ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲು ರಚಿಸಿರುವ ಸಮಿತಿಗಳ ರಚನೆ.</u>**

- ರೂ. 500 ಕೋಟಿಗಳಿಗೂ ಹೆಚ್ಚಿನ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳನ್ನು ಪರಿಗಣಿಸಲು ಮತ್ತು ಅನುಮೋದಿಸಲು ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ.

- ರೂ. 15 ಕೋಟಿಗಳಿಗೂ ಮೇಲ್ಪಟ್ಟ ಮತ್ತು ರೂ. 500 ಕೋಟಿಗಳ ವರೆಗಿನ ಬಂಡವಾಳ ಹೂಡಿಕೆಯನ್ನು ಒಳಗೊಂಡ ಯೋಜನೆಗಳನ್ನು ಪರಿಗಣಿಸಲು ಮತ್ತು ಅನುಮೋದಿಸಲು ಕರ್ನಾಟಕ ಸರ್ಕಾರದ ಸನ್ಮಾನ್ಯ ಸಚಿವರು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಏಕ ಗವಾಕ್ಷಿ ಅಂಗೀಕಾರ ಸಮಿತಿ.

- ರೂ.15 ಕೋಟಿಗಳ ವರೆಗಿನ ಬಂಡವಾಳ ಹೂಡಿಕೆ ಮತ್ತು ಅನುಮೋದಿಸಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಅಂಗೀಕಾರ ಸಮಿತಿ.

- ಬಂಡವಾಳ ಹೂಡಿಕೆ ಪ್ರವರ್ಧನಾ ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾಕೈಗಾರಿಕಾ ಕೇಂದ್ರಗಳಲ್ಲಿ ಕರ್ನಾಟಕ ಉದ್ಯೋಗ ಮಿತ್ರವನ್ನು ನೋಡಲ್ ಏಜೆನ್ಸಿಯನ್ನಾಗಿ ನೇಮಕ ಮಾಡಲಾಗಿದೆ.

- ಪ್ರವೇಶ ಹಂತದಲ್ಲಿ ಸಲ್ಲಿಸಬೇಕಾದ ಅರ್ಜಿಫಾರಂಗಳ ಸಂಖ್ಯೆಯನ್ನು ಕಡಿಮೆ ಮಾಡಲು ಮತ್ತು ಪುನರಾವರ್ತನೆಯನ್ನು ತಡೆಯಲು ಸಂಯೋಜಿತ ಅರ್ಜಿ ಫಾರಂ (ಸಿಎಎಫ್) ವ್ಯವಸ್ಥೆಯನ್ನು ಪರಿಚಯಿಸಲಾಗಿದೆ.

- ಉದ್ಯಮಿಗಳಿಂದ ಸ್ವಯಂ ದೃಢೀಕರಣ ವ್ಯವಸ್ಥೆ ಜಾರಿಗೊಳಿಸಿದೆ. ಈ ರೀತಿ ಸ್ವಯಂ ದೃಢೀಕರಿಸಿದ ದಾಖಲೆಗಳನ್ನು ಅಂಗೀಕಾರ ನೀಡಿಕೆ ಉದ್ದೇಶಕ್ಕೆ ಮತ್ತು ಉದ್ಯಮಿಗಳಿಗೆ ಸೌಲಭ್ಯ ನೀಡಲು ಇಲಾಖೆಗಳು ಮತ್ತು ಅಧಿಕಾರಿಗಳು ಅಂಗೀಕರಿಸುವರು.

**ಪೂರ್ವಭಾವಿಕ್ರಮಗಳು:**

- ಅರ್ಜಿ ಭರ್ತಿಮಾಡಲು, "ಬಂಡವಾಳ ಹೂಡಿಕೆ ಅಪೇಕ್ಷೆ ದಾಖಲಿಸಲು" ಮತ್ತು ಅರ್ಜಿಸಲ್ಲಿಸಲು ಅವುಗಳನ್ನು ಭರ್ತಿಮಾಡಲು ನೆರವು ಅಗತ್ಯವಿದ್ದಲ್ಲಿ ಉದ್ಯೋಗ ಮಿತ್ರದ/ ಡಿಐಸಿಗಳ ಅಧಿಕಾರಿಯೊಬ್ಬರು ಸಹಕಾರನೀಡುವರು ಮತ್ತು ಅಗತ್ಯ ನೆರವು ನೀಡುವರು.
- ಯೋಜನಾ ಪ್ರವರ್ತಕರು ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿಮಾಡಲು ಸಿದ್ಧರಿದ್ದಲ್ಲಿ, ಅಂತಹ ಪ್ರವರ್ತಕರು ಲಾಗಿನ್ ಕ್ಲಿಕ್‌ಮಾಡಿ/ ಹೊಸ ಯೂಸರ್ ಐಡಿ ಸೃಷ್ಟಿಸಿ ಮತ್ತು ಅಗತ್ಯ ವಿವರಗಳನ್ನು ಒದಗಿಸಿ ಯೂಸರ್–ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬೇಕು.
- ಒಮ್ಮೆ ಪ್ರವರ್ತಕರು ಯೂಸರ್–ಐಡಿ ಮತ್ತು ಪಾಸ್‌ವರ್ಡ್ ಸೃಷ್ಟಿಸಿದ ಮೇಲೆ ಆಕೆ/ಆತ ಲಾಗಿನ್ ಆಗಿ ಅರ್ಜಿಯನ್ನು ನೋಡಬಹುದು ಮತ್ತು ಅರ್ಜಿ ಫಾರಂ ಭರ್ತಿಮಾಡಬಹುದು.
- ಹಣ ಪಾವತಿಯನ್ನು ಆನ್‌ಲೈನ್‌ನಲ್ಲಿ ಮಾಡಬೇಕು ಮತ್ತು ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕು ಮತ್ತು ಅರ್ಜಿಸಲ್ಲಿಸಬೇಕು.
- ಪ್ರವರ್ತಕರು ಆನ್‌ಲೈನ್‌ನಲ್ಲಿ ಅರ್ಜಿಯ ಸ್ಥಿತಿಗತಿಯನ್ನು ಪರಾಮರ್ಶಿಸಬಹುದು.
- ಅತ್ಯುನ್ನತ ಭದ್ರತೆ ಮತ್ತು ವಿಶ್ವಾಸಾರ್ಹತೆಯೊಡನೆ ಅರ್ಜಿಸಲ್ಲಿಸಲು ಡಿಜಿಟಲ್ ಸಹಿ ಕಡ್ಡಾಯ.
- ಅರ್ಜಿದಾರರು ಅರ್ಜಿ/ದಾಖಲೆಗಳನ್ನು ಸಲ್ಲಿಸಲು/ ಅಪ್‌ಲೋಡ್ ಮಾಡಲು ಡಿಜಿಟಲ್ ಸಹಿ ಸಾಧನ ಹೊಂದಿರಬೇಕು.

**ಪಾವತಿ ವಿವರಗಳು:–**

ಪ್ರಕ್ರಿಯಾ ಶುಲ್ಕವು ಈ ಕೆಳಗೆ ತಿಳಿಸಿರುವಂತೆ ಯೋಜನೆಯ ವೆಚ್ಚದ ಮೇಲೆ ಅವಲಂಬಿಸಿರುತ್ತದೆ.

| ಕ್ರ.ಸಂ | ಯೋಜನೆಯ ವೆಚ್ಚ | ಸಾಮಾನ್ಯ ಪ್ರವರ್ಗಕ್ಕೆ (ಸರಕುಗಳ ಸೇವಾ ತೆರಿಗೆ ಸೇರಿ) (ರೂ.ಗಳಲ್ಲಿ) | ಪ.ಜಾತಿ/ಪ.ಪಂ & ಸೌರ/ ಗಾಳಿ ಯೋಜನೆ (ಸರಕುಗಳ ಸೇವಾ ತೆರಿಗೆ ಸೇರಿ) (ರೂ.ಗಳಲ್ಲಿ) |
|---|---|---|---|
| 1 | ಯೋಜನೆಯ ವೆಚ್ಚ 15 ಕೋಟಿಯಿಂದ 30 ಕೋಟಿವರೆಗಿದ್ದರೆ | 23,600/– | 11,800/– |
| 2 | ಯೋಜನೆಯ ವೆಚ್ಚ 30 ಕೋಟಿಯಿಂದ 50 ಕೋಟಿವರೆಗಿದ್ದರೆ | 47,200/– | 23,600/– |
| 3 | ಯೋಜನೆಯ ವೆಚ್ಚ 50 ಕೋಟಿಯಿಂದ 100 ಕೋಟಿವರೆಗಿದ್ದರೆ | 1,18,000/– | 59,000/– |
| 4 | ಯೋಜನೆಯ ವೆಚ್ಚ 100 ಕೋಟಿಯಿಂದ 250 ಕೋಟಿವರೆಗಿದ್ದರೆ | 2,36,000/– | 1,18,000/– |
| 5 | ಯೋಜನೆಯ ವೆಚ್ಚ 250 ಕೋಟಿಯಿಂದ 500 ಕೋಟಿವರೆಗಿದ್ದರೆ | 3,54,000/– | 1,77,000/– |
| 6 | ಯೋಜನೆಯ ವೆಚ್ಚ 500 ಕೋಟಿಯಿಂದ 1000 ಕೋಟಿವರೆಗಿದ್ದರೆ | 5,31,000/– | 2,65,500/– |
| 7 | ಯೋಜನೆಯ ವೆಚ್ಚ 1000 ಕೋಟಿಯಿಂದ 5000 ಕೋಟಿವರೆಗಿದ್ದರೆ | 8,85,000/– | 4,42,500/– |
| 8 | ಯೋಜನೆಯ ವೆಚ್ಚ 5000 ಕೋಟಿಗಿಂತ ಹೆಚ್ಚಿದ್ದರೆ | 17,70,000/– | 8,85,000/– |

ಹೂಡಿಕೆದಾರರು ಪೋರ್ಟಲ್‌ನಲ್ಲಿ ಪಾವತಿ ಮಾಡಲು ಈ ಕೆಳಗೆ ನೀಡಿದ ಆಯ್ಕೆಗಳಲ್ಲಿ ಯಾವುದನ್ನಾದರು ಆಯ್ಕೆ ಮಾಡಬಹುದು.

**ತ್ವರಿತ ಪಾವತಿ ಆಯ್ಕೆಗಳು:–**

- ಕ್ರೆಡಿಟ್ ಕಾರ್ಡ್
- ಡೈರೆಕ್ಟರ್ ಡೆಬಿಟ್

**ಮುಂದೂಡಲ್ಪಟ್ಟ ಪಾವತಿ ಆಯ್ಕೆಗಳು:–**

- ರಾಷ್ಟ್ರೀಯ ಎಲೆಕ್ಟ್ರಾನಿಕ್ ಹಣ ವರ್ಗಾವಣೆ (ಎನ್‌ಇಎಫ್‌ಟಿ)
- ಆರ್‌ಟಿಜಿಎಸ್.

**ಎನ್‌ಇಎಫ್‌ಟಿ ಮತ್ತು ಆರ್‌ಟಿಜಿಎಸ್‌ಗೆ ಬ್ಯಾಂಕ್ ವಿವರಗಳು**

ಬ್ಯಾಂಕ್‌ನ ಹೆಸರು: ವಿಜಯ ಬ್ಯಾಂಕ್
ಶಾಖಾ ಕಛೇರಿ: ರೇಸ್ ಕೋರ್ಸ್ ರಸ್ತೆ ಶಾಖೆ
ಕುಮ್ ಖಾತೆ ಸಂಖ್ಯೆ: 117801010024178
ಐಎಫ್‌ಎಸ್‌ಸಿ ಕೋಡ್: VIJB0001178

**ಸಲ್ಲಿಸಿದ ಪ್ರಸ್ತಾವನೆಯ ಪ್ರಕ್ರಿಯೆ ಹಂತಗಳು:–**

- ಅರ್ಜಿಫಾರಂಗಳನ್ನು ಕರ್ನಾಟಕ ಉದ್ಯೋಗ ಮಿತ್ರ/ಜಿಲ್ಲಾ ಕೈಗಾರಿಕಾ ಕೇಂದ್ರಗಳು ಪ್ರಕ್ರಿಯೆಗೊಳಿಸಿ/ಪರಿಶೀಲನೆ ಮಾಡಿ, ಯೋಜನೆಯ ಬಂಡವಾಳ ಹೂಡಿಕೆ ಪ್ರಮಾಣದ ಅನುಸಾರ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಅಥವಾ ಎಸ್‌ಎಚ್‌ಎಲ್‌ಸಿಸಿ ಅಥವಾ ಡಿಎಲ್‌ಎಸ್‌ಡಬ್ಲ್ಯೂಸಿಸಿ ಮುಂದೆ ಇಡುವುದು.

- ಪರಿಶೀಲನೆ ಪ್ರಕ್ರಿಯೆ ಅವಧಿಯಲ್ಲಿ ಯೋಜನಾ ಪ್ರಸ್ತಾವನೆಯ ಆಧಾರದ ಮೇಲೆ ಅಧಿಸೂಚನೆಯ ಮೂಲಕ ಇಲಾಖೆಯು ಹೆಚ್ಚುವರಿ ಅಂಕಿ ಅಂಶ ಅಥವಾ ದಾಖಲೆಗಳನ್ನು ಕೇಳಬಹುದು ಮತ್ತು ಅವುಗಳನ್ನು ತಾವು ಸೃಷ್ಟಿಸಿರುವ ಲಾಗಿನ್ ಐಡಿ ಬಳಸಿ ಅಪ್‌ಲೋಡ್ ಮಾಡಬಹುದು.
- ಎಸ್‌ಎಂಎಸ್ ಮತ್ತು ಇ–ಮೇಲ್ ಮಾಹಿತಿ ನೀಡುವ ಮೂಲಕ ಭೂ ಲೆಕ್ಕಪರಿಶೋಧನಾ ಸಮಿತಿ ಸಭೆ/ಡಿಎಲ್‌ಎಸ್ ಡಬ್ಲ್ಯೂಸಿಸಿ/ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಸಭೆಗೆ ಹಾಜರಾಗಲು ಹೂಡಿಕೆದಾರರನ್ನು ಅಹ್ವಾನಿಸಲಾಗುವುದು ಮತ್ತು ಅವರು ಯೋಜನೆಯ ವೈಶಿಷ್ಟ್ಯತೆಗಳ ಬಗ್ಗೆ ನಿರೂಪಣೆ ಮಾಡಬೇಕಾಗುವುದು.
- ಒಮ್ಮೆ ಯೋಜನಾ ಪ್ರಸ್ತಾವನೆಯನ್ನು ಡಿಎಲ್‌ಎಸ್‌ಡಬ್ಲ್ಯೂಸಿಸಿ/ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ಎಸ್‌ಎಚ್‌ಎಲ್‌ಸಿಸಿ ಅಂಗೀಕರಿಸಿದಾಗ, ಯೋಜನಾ ಪ್ರವರ್ತಕರು ಇ–ಉದ್ಯಮಿ ವೆಬ್‌ಸೈಟ್‌ಗೆ ಲಾಗ್ ಆನ್ ಆಗಿ ವಿವಿಧ ಅಂಗೀಕಾರಗಳು/ ಅನುಮೋದನೆಗಳನ್ನು ಪಡೆದುಕೊಳ್ಳಲು ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕೆಎಸ್‌ಪಿಸಿಬಿ, ಐ ಅಂಡ್ ಸಿ ಇಲಾಖೆ, ಇಂಧನ ಇಲಾಖೆ, ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇತ್ಯಾದಿಗಳಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳೊಡನೆ ಆನ್‌ಲೈನ್ ಅರ್ಜಿಸಲ್ಲಿಸಬಹುದು.
- ಹೂಡಿಕೆದಾರರ ಪರವಾಗಿ ಕರ್ನಾಟಕ ಉದ್ಯೋಗ ಮಿತ್ರ/ ಜಿಲ್ಲಾ ಕೈಗಾರಿಕ ಕೇಂದ್ರಗಳು ಸಂಬಂಧಪಟ್ಟ ಇಲಾಖೆಗಳು/ ಏಜೆನ್ಸಿಗಳೊಡನೆ ಅನುಸರಣೆ ಕಾರ್ಯ ನಡೆಸುವವು ಮತ್ತು ಅಗತ್ಯವಾದ ಅನುಮತಿಗಳು/ಅನುಮೋದನೆ ಪಡೆಯಲು ಸಮನ್ವಯ ಸಹಕಾರ ನೀಡುವವು.

**ಅನುಮತಿ/ ಅನುಮೋದನೆಗಾಗಿ ಅರ್ಜಿ ಸುಲ್ಲಿಸುವಿಕೆ:–**

**ವಿವಿಧ ಇಲಾಖೆಗಳಿಂದ ಒಪ್ಪಿಗೆ/ ಅನುಮೋದನೆ ಪಡೆಯಲು ಅರ್ಜಿ ಸಲ್ಲಿಸುವಿಕೆ.**

ಯಾರ ಯೋಜನೆಗಳು ಡಿಎಲ್‌ಎಸ್‌ಡಬ್ಲ್ಯೂಸಿಸಿ ಅಥವಾ ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಅಥವಾ ಎಸ್‌ಎಚ್‌ಎಲ್‌ಸಿಸಿ ಇವರಿಂದ ಅನುಮೋದನೆಯಾಗಿರುವವೋ ಮತ್ತು ಸಂಬಂಧಪಟ್ಟ ಇಲಾಖೆಗಳಿಂದ ನಿರ್ದಿಷ್ಟ ಅನುಮೋದನೆ/ಒಪ್ಪಿಗೆ ಪಡೆಯಬೇಕಾಗಿರುವ ಯೋಜನಾ ಪ್ರವರ್ತಕರು ಸದರಿ ಭಾಗದ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

"ಇಬಿಜ್ ಕರ್ನಾಟಕ" ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಕೆಳಕಂಡ ಇಲಾಖೆ ನೆರವು ಮತ್ತು ಸೇವೆಗಳು ದೊರೆಯುವವು.

1. **ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ**

   ಎ. ಭೂ ಹಂಚಿಕೆ ಪತ್ರ, ಸ್ಥಿರಿಕರಣ ಪತ್ರ, ಸ್ವಾಧೀನ ಪ್ರಮಾಣ ಪತ್ರ, ಗುತ್ತಿಗೆ ಒಪ್ಪಂದ ಪತ್ರ ಬರೆದುಕೊಡುವುದು ಮತ್ತು ನಕ್ಷೆ ಅನುಮೋದನೆ.

2. **ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕಾಭಿವೃದ್ಧಿ ನಿಗಮ**

   ಎ. ಪ್ಲಾಟ್/ಷೆಡ್ ಹಂಚಿಕೆ ಪತ್ರ, ಸ್ವಾಧೀನ ಪ್ರಮಾಣಪತ್ರ, ಗುತ್ತಿಗೆ ಒಪ್ಪಂದ ಪತ್ರ ಬರೆದುಕೊಡುವುದು ಮತ್ತು ನಕ್ಷೆ ಅನುಮೋದನೆ.

3. **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

   ಎ. ಕಿತ್ತಳೆ ಮತ್ತು ಹಸಿರು ಪ್ರರ್ವದ ಕೈಗಾರಿಕೆಗಳ ಸಂಬಂಧ (ಫಾರಂ–ಒಜಿ) ಜಲ (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಅನ್ವಯ ಸ್ಥಾಪನೆಗೆ ಅನುಮತಿ ಮತ್ತು ವಾಯು (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ, 1981ರ ಅನ್ವಯ ಸ್ಥಾಪನೆಗೆ ಅನುಮತಿ.

   ಬಿ. ಕೆಂಪು ಪ್ರವರ್ಗದ ಉದ್ದಿಮೆಯ ಸಂಬಂಧ ಜಲ (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ 1974ರ ಅನ್ವಯ ಸ್ಥಾಪನೆಗೆ ಅನುಮತಿ.

   ಸಿ. ಕೆಂಪು ಪ್ರವರ್ಗದ ಉದ್ದಿಮೆ ಸಂಬಂಧದಲ್ಲಿ ವಾಯು (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ, 1981ರ ಅನ್ವಯ ಸ್ಥಾಪನೆಗೆ ಅನುಮತಿ.

4. **ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಆರೋಗ್ಯ ಇಲಾಖೆ.**

   ಎ. ಕರ್ನಾಟಕ ಕಾರ್ಖಾನೆಗಳ ನಿಯಮ 1969ರ ನಿಯಮ 3 (2) ಅನ್ವಯ ಸ್ಥಾವರ ಮತ್ತು ಯಂತ್ರೋಪಕರಣಕ್ಕಾಗಿ ಕಾರ್ಖಾನೆ ಕಟ್ಟಡ ಮತ್ತು ಲೇಔಟ್ ನಿರ್ಮಾಣಕ್ಕಾಗಿ ಅನುಮೋದನೆ.

**5. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ.**

ಎ. ಕೈಗಾರಿಕಾ ಉದ್ಯಮಿಗಳ ಜ್ಞಾಪನಾ ಪತ್ರ–ಭಾಗ–1 (ಈಗಾಗಲೇ "ಆನ್‌ಲೈನ್ ಅರ್ಜಿ ಸಲ್ಲಿಸುವ ವ್ಯವಸ್ಥೆ ಜಾರಿಯಲ್ಲಿದೆ ಹಾಗೂ ಅದನ್ನು ಇ–ಉದ್ಯಮಿಗೆ ಸಂಪರ್ಕಿಸಲಾಗುವುದು")

ಬಿ. ಜಮೀನು, ಪ್ಲಾಟ್ ಮತ್ತು ಷೆಡ್‌ನ ದಾಖಲೆಗಳ ನೋಂದಣಿಗೆ ಹಾಗೂ ಸಾಲ ಪಡೆಯುವ ಸಂಬಂಧ ದಾಖಲೆಗಳ ನೋಂದಣಿಗೆ ಮುದ್ರಾಂಕ ಸುಂಕ ವಿನಾಯಿತಿ ಪ್ರಮಾಣ ಪತ್ರ ಮತ್ತು ರಿಯಾಯಿತಿ ನೋಂದಣಿ ಶುಲ್ಕದ ಪ್ರಮಾಣ ಪತ್ರ.

ಸಿ. ಯೋಜನೆ ಅನುಷ್ಠಾನ ಮಾಡುವ ಅವಧಿಯಲ್ಲಿ ಬಂಡವಾಳ ಸರಕುಗಳ ಖರೀದಿ ಮೇಲೆ ಪ್ರವೇಶ ತೆರಿಗೆ ವಿನಾಯಿತಿ.

**6. ನಗರ ಯೋಜನೆ ಇಲಾಖೆ ಮತ್ತು ಸ್ಥಳೀಯ ಯೋಜನಾ ಪ್ರಾಧಿಕಾರಿಗಳು**

ಎ. ಭೂ ಉಪಯೋಗ ಬದಲಾವಣೆ

ಬಿ. ಲೇಔಟ್ ನಕ್ಷೆ ಅನುಮೋದನೆ

ಸಿ. ಕಟ್ಟಡ ನಕ್ಷೆ ಅನುಮೋದನೆ

**7. ಪೌರಾಡಳಿತ ಇಲಾಖೆ**

ಎ. ಉದ್ದಿಮೆ ಸ್ಥಾಪನೆಗೆ ಪರವಾನಗಿ

ಬಿ. ಕಟ್ಟಡ ನಿರ್ಮಾಣಕ್ಕೆ ಪರವಾನಗಿ ಮತ್ತು ನಕ್ಷೆ ಅನುಮೋದನೆ

**8. ಬೆಸ್ಕಾಂ/ ಜೆಸ್ಕಾಂ/ ಹೆಸ್ಕಾಂ/ ಸೆಸ್ಕಾಂ/ ಮೆಸ್ಕಾಂ**

ಎ. ವಿದ್ಯುತ್ ಕಾಯ್ದೆ–2003ರ ಅನ್ವಯ ವಿದ್ಯುತ್ ಸರಬರಾಜು

**9. ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ**

ಎ. ಅಗ್ನಿ ಅಪಾಯ ವಿಚಾರವಾಗಿ ಎನ್‌ಒಸಿ/ಅನುಮತಿ ಪತ್ರ ನೀಡಿಕೆಗಾಗಿ ಅರ್ಜಿ ಸಲ್ಲಿಸುವುದು.

**10. ಜಲಸಂಪನ್ಮೂಲ ಇಲಾಖೆ**

ಎ. ನೀರಿನ ಹಂಚಿಕೆ

**ಪ್ರಸ್ತಾವನೆ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸುವಿಕೆ**

ಈಗಾಗಲೇ ಅನುಮೋದನೆಯಾಗಿರುವ ಯೋಜನೆಗೆ ಸಮಯದ ವಿಸ್ತರಣೆ, ಸ್ಥಳ ಬದಲಾವಣೆ ಇತ್ಯಾದಿಗಳಂತಹ ತಿದ್ದುಪಡಿಗಳನ್ನು ಮಾಡಲು ಯೋಜನಾ ಪ್ರವರ್ತಕರು ಬಯಸಿದರೆ

* ಕಂಪನಿ ಹೆಸರು ನಮೂದಿಸಿ, ಸರ್ಚ್ ಮೇಲೆ ಕ್ಲಿಕ್ ಮಾಡಿ, ಚೆಕ್ ಬಾಕ್ಸ್ ಆಯ್ಕೆ ಮಾಡಿ ಮತ್ತು ಯೂಸರ್ ಐಡಿ ಮತ್ತು ಡಿಫಾಲ್ಟ್ ಪಾಸ್‌ವರ್ಡ್ ಪಡೆಯಿರಿ.
* ನೋಂದಣಿ ಫಾರಂ ಭರ್ತಿ ಮಾಡಿ ಮತ್ತು ಪಾಸ್‌ವರ್ಡ್ ಸೃಷ್ಟಿಸಿ ಹಾಗೂ ತಿದ್ದುಪಡಿ ವಿಧಾನವನ್ನು ಆಯ್ಕೆ ಮಾಡಿ ಮತ್ತು ಅಧಿಕೃತ ವ್ಯಕ್ತಿಯ ವಿವರಗಳನ್ನು ಭರ್ತಿ ಮಾಡಿ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಮತ್ತು ಸಲ್ಲಿಸಿ, ಒಂದಕ್ಕಿಂತ ಹೆಚ್ಚು ತಿದ್ದುಪಡಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಹೂಡಿಕೆದಾರರು ಈ ಕೆಳಕಂಡ ಮಾದರಿಯ ತಿದ್ದುಪಡಿಗೆ ಅರ್ಜಿ ಸಲ್ಲಿಸಬಹುದು:

(i) ಸಮಯದ ವಿಸ್ತರಣೆ (ii) ಚಟುವಟಿಕೆಗಳ ಬದಲಾವಣೆ (iii) ಸಂಯೋಜನೆ ಬದಲಾವಣೆ (iv) ಸ್ವಾಧೀನದ ಬದಲಾವಣೆ (v) ಹೆಚ್ಚುವರಿ ನೀರಿನ ಅಗತ್ಯತೆ (vi) ಹೆಚ್ಚುವರಿ ವಿದ್ಯುತ್‌ನ ಅಗತ್ಯತೆ (vii) ಸರ್ಕಾರಿ ಆದೇಶಕ್ಕೆ ತಿದ್ದುಪಡಿ (viii) ಉತ್ಪಾದನಾ ಸಾಮರ್ಥ್ಯದ ಬದಲಾವಣೆ (ix) ಅನುಮೋದನೆ ವರ್ಗಾವಣೆ (x) ಗ್ರಾಮ/ಸರ್ವೆ ಸಂಖ್ಯೆಗಳಲ್ಲಿ ಬದಲಾವಣೆ (xi) ಹೆಚ್ಚುವರಿ ಜಮೀನು ಬೇಕಾಗಿರುವಿಕೆ (xii) ಸ್ಥಳ/ತಾಣದ ಬದಲಾವಣೆ (xiii) ಕಂಪನಿ ಹೆಸರಿನ ಬದಲಾವಣೆ (xiv) ಹೂಡಿಕೆಯಲ್ಲಿನ ಬದಲಾವಣೆ (xv) ಇತರೆ ತಿದ್ದುಪಡಿಗಳು

**ಪೂರ್ವಭಾವಿ ಕ್ರಮಗಳು**

* ತಿದ್ದುಪಡಿ ಬಯಸುವ ಪ್ರವರ್ತಕರು ಈ ಮೊದಲು ಅವರ ಯೋಜನೆ ಅನುಮೋದಿಸಿರುವ ಬಗ್ಗೆ ನೀಡಿದ್ದ ಆದೇಶದ ಪ್ರತಿಯನ್ನು ಹೊಂದಿರಬೇಕು.
* ಅತ್ಯುತ್ತಮ ಭದ್ರತೆ ಮತ್ತು ವಿಶ್ವಾಸಾರ್ಹತೆಯೊಡನೆ ಅರ್ಜಿ ಸಲ್ಲಿಸಲು ಡಿಜಿಟಲ್ ಸಹಿಯನ್ನು ಕಡ್ಡಾಯಗೊಳಿಸಲಾಗಿದೆ.
* ಅರ್ಜಿದಾರರು ಅರ್ಜಿ/ದಾಖಲೆ ಪತ್ರಗಳನ್ನು ಸಲ್ಲಿಸಲು/ ಅಪ್‌ಲೋಡ್ ಮಾಡಲು ಡಿಜಿಟಲ್ ಸಹಿ ಸಾಧನವನ್ನು ಹೊಂದಿರಬೇಕು.

**ಮಾಹಿತಿ ಹಕ್ಕು ಅಧಿನಿಯಮ ಕಾಯ್ದೆ, 2005**

**ಮಾಹಿತಿ ಪಡೆಯಲು ಸಲ್ಲಿಸುವ ನಮೂನೆ.**

ಶುಲ್ಕ : ರೂ. ಪ್ರತಿ ಪುಟಕ್ಕೆ

| | |
|---|---|
| 1. ಅರ್ಜಿದಾರನ ಪೂರ್ಣ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2. ಅಂಚೆ ವಿಳಾಸ | |
| 3. ಅಗತ್ಯವಿರುವ ದಾಖಲೆಗಳ ವಿವರಗಳು | |
| 4. ಯಾವ ವರ್ಷಕ್ಕೆ ದಾಖಲೆ ಪತ್ರಗಳು ಸಂಬಂಧಿಸಿದೆ | |
| 5. ಯಾವ ಉದ್ದೇಶಕ್ಕೆ ಮಾಹಿತಿ ಬೇಕಾಗಿದೆ ಮತ್ತು ಮಾಹಿತಿ ಪಡೆಯಲು ಅರ್ಜಿದಾರರು ಹೊಂದಿರುವ ಆಸಕ್ತಿ ಏನು | |

ರಶೀದಿ ಸಂಖ್ಯೆ:

ಸ್ಥಳ :

ದಿನಾಂಕ:

ಅರ್ಜಿದಾರನ ಸಹಿ

(ಸೂಚನೆ: ದೋಷಯುಕ್ತ ಮತ್ತು ಅಪೂರ್ಣವಾದ ಅರ್ಜಿಗಳನ್ನು ಹಿಂದಿರುಗಿಸಲಾಗುವುದು.)

**ಮೇಲ್ಮನವಿ ಪ್ರಾಧಿಕಾರ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪಟ್ಟಿ**

| ಕ್ರ.ಸಂ | ಮೇಲ್ಮನವಿ ಪ್ರಾಧಿಕಾರ ಅಧಿಕಾರಿಯ ಹೆಸರು | ಅಧಿಕಾರ ವ್ಯಾಪ್ತಿ | ವಿಳಾಸ ದೂರವಾಣಿ ಮತ್ತು ಇ-ಮೇಲ್ |
|---|---|---|---|
| 1 | ಬಿ.ಕೆ. ಶಿವಕುಮಾರ್, ವ್ಯವಸ್ಥಾಪಕ ನಿರ್ದೇಶಕರು | ಅಭಿವೃದ್ಧಿ, ಆಡಳಿತ, ಲೆಕ್ಕಪತ್ರ ಮತ್ತು ಹಣಕಾಸು ವಿಭಾಗ ಕುಮ್ ಪ್ರಧಾನ ಕಚೇರಿಯ ಪಿಐಒಗಳ ಮೇಲಿನ ಎಲ್ಲಾ 1ನೇ ಮೇಲ್ಮನವಿಗಳು | #49, 3ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.<br><br>ದೂರವಾಣಿ ಸಂ: 22282392<br>ಫ್ಯಾಕ್ಸ್: 080–22266063<br>ಇ–ಮೇಲ್<br>md@kumbangalore.com |


**ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ**

| ಕ್ರ.ಸಂ | ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು | ಅಧಿಕಾರ ವ್ಯಾಪ್ತಿ | ದೂರವಾಣಿ ಮತ್ತು ಇ–ಮೇಲ್ ವಿಳಾಸ |
|---|---|---|---|
| 2 | ಗಂಗಾಧರಯ್ಯ<br>ಜಂಟಿ ನಿರ್ದೇಶಕರು–4 | ಅಭಿವೃದ್ಧಿ, ಆಡಳಿತ, ಲೆಕ್ಕಪತ್ರ ಮತ್ತು ಹಣಕಾಸಿನ ವಿಭಾಗ, ಕುಮ್ ಪ್ರಧಾನ ಕಚೇರಿಗೆ ಸಂಬಂಧಿಸಿದ ವಿಚಾರಗಳು. | #49, 3ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.<br><br>ದೂರವಾಣಿ ಸಂ: 22282392<br>ಫ್ಯಾಕ್ಸ್: 080–22266063<br>ಇ–ಮೇಲ್<br>md@kumbangalore.com |

**<u>ಅಧಿಕಾರಿಗಳು ಮತ್ತು ಅವರ ವೇತನ ಶ್ರೇಣಿ.</u>**

| **<u>ಕ್ರಸಂ</u>** | **<u>ಪದನಾಮ</u><br><u>ಹುದ್ದೆ ಹೆಸರು</u>** | **<u>ವೇತನ ಶ್ರೇಣಿ</u>** |
|---|---|---|
| 1 | ವ್ಯವಸ್ಥಾಪಕ ನಿರ್ದೇಶಕರು | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ, ನಿಯೋಜನೆಯಾಗಿರುವ ಅಧಿಕಾರಿ, (ಅಪರ ನಿರ್ದೇಶಕರ ದರ್ಜೆ) |
| 2 | ಜಂಟಿ ನಿರ್ದೇಶಕರು | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ, ನಿಯೋಜನೆಯಾಗಿರುವ ಅಧಿಕಾರಿ, (ಜಂಟಿ ನಿರ್ದೇಶಕರ ದರ್ಜೆ) |
| 3 | ಉಪ ನಿರ್ದೇಶಕರು | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ, ನಿಯೋಜನೆಯಾಗಿರುವ ಅಧಿಕಾರಿ, (ಉಪ ನಿರ್ದೇಶಕರ ದರ್ಜೆ) |
| 4 | ಸಹಾಯಕ ನಿರ್ದೇಶಕರು | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ, ನಿಯೋಜನೆಯಾಗಿರುವ ಅಧಿಕಾರಿ, (ಸಹಾಯಕ ನಿರ್ದೇಶಕರ ದರ್ಜೆ) |
| 5 | ಕಾರ್ಯನಿರ್ವಹಣಾಧಿಕಾರಿ | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ, ನಿಯೋಜನೆಯಾಗಿರುವ ಅಧಿಕಾರಿ, (ಕೈಗಾರಿಕಾ ಪ್ರವರ್ಧನಾಧಿಕಾರಿ ವಿಸ್ತರಣಾ ಅಧಿಕಾರಿ ದರ್ಜೆ) |

**<u>ಸಂಸ್ಥೆಯ ಚಾರ್ಟ್‌ನ್ನು ಅನುಬಂಧ–1ರಲ್ಲಿ ಸೇರಿಸಲಾಗುತ್ತದೆ.</u>**




ಪರಿಚ್ಛೇದ 4(1) (ಎ) ಅನುಸರಣೆಗೆ ಸಂಬಂಧಿಸಿದಂತೆ ಯೋಜನೆಗೆ ನೀಡಿರುವ ಅನುಮೋದನೆಗಳು, ಲೆಕ್ಕಪತ್ರ ಮತ್ತು ಆಡಳಿತಕ್ಕೆ ಸಂಬಂಧಿಸಿದ ಕಡತಗಳ ಪಟ್ಟಿಯನ್ನು ಅನುಬಂಧ–2 ಆಗಿ ಲಗತ್ತಿಸಿದೆ.